**ಕರ್ನಾಟಕ ಸರ್ಕಾರ**

# ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡುವ
# ಗಣ್ಯ ವ್ಯಕ್ತಿಗಳಿಗೆ ಆತಿಥ್ಯ ನೀಡುವ ಬಗ್ಗೆ ಮಾರ್ಗ ಸೂಚಿಗಳು

ಮತ್ತು

# ಕರ್ನಾಟಕ ರಾಜ್ಯದ ಆದ್ಯತಾ ಸೂಚಿಪಟ್ಟಿ

2015

(ಅಕ್ಟೋಬರ್)

**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ**

**(ರಾಜ್ಯ ಶಿಷ್ಟಾಚಾರ)**

**ವಿಧಾನಸೌಧ, ಬೆಂಗಳೂರು-560 001**

ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡುವ
# ಗಣ್ಯ ವ್ಯಕ್ತಿಗಳಿಗೆ ಆತಿಥ್ಯ ನೀಡುವ ಬಗ್ಗೆ ಮಾರ್ಗ ಸೂಚಿಗಳು

ಮತ್ತು

# ಕರ್ನಾಟಕ ರಾಜ್ಯದ ಆದ್ಯತಾ ಸೂಚಿಪಟ್ಟಿ

2015

(ಅಕ್ಟೋಬರ್)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ರಾಜ್ಯ ಶಿಷ್ಟಾಚಾರ)
ವಿಧಾನಸೌಧ, ಬೆಂಗಳೂರು-560 001

## ವಿಷಯ ಸೂಚಿ


| | | ಪುಟ ಸಂಖ್ಯೆ |
|---|---|---|
| 1 | ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡುವ ಗಣ್ಯ ವ್ಯಕ್ತಿಗಳಿಗೆ ರಾಜ್ಯ ಆತಿಥ್ಯ ನೀಡುವ ಕುರಿತು ಮಾರ್ಗಸೂಚಿಗಳು | 01-23 |
| 2 | ಕರ್ನಾಟಕ ರಾಜ್ಯದಲ್ಲಿ ಆದ್ಯತಾ ಸೂಚಿ | 24-49 |

# ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡುವ ಗಣ್ಯ ವ್ಯಕ್ತಿಗಳಿಗೆ ರಾಜ್ಯ ಆತಿಥ್ಯ ನೀಡುವ ಬಗ್ಗೆ ಮಾರ್ಗಸೂಚಿಗಳು
# ಮತ್ತು
# ಕರ್ನಾಟಕ ರಾಜ್ಯದಲ್ಲಿ ಆದ್ಯತಾ ಸೂಚಿ

******

ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡುವ ಗಣ್ಯ ವ್ಯಕ್ತಿಗಳಿಗೆ ರಾಜ್ಯ ಆತಿಥ್ಯವನ್ನು ನೀಡುವ ಮಾರ್ಗಸೂಚಿಗಳನ್ನು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 554 ಹೆಚ್‌ಜಿಜಿ. 2005, ದಿನಾಂಕ 22.04.2006 ರ ಮೂಲಕ ಹೊರಡಿಸಿದೆ. ಕರ್ನಾಟಕ ರಾಜ್ಯದಲ್ಲಿನ ಆದ್ಯತಾಸೂಚಿಯನ್ನು ಆದೇಶ ಸಂಖ್ಯೆ: ಡಿಪಿಎಆರ್ 02 ಹೆಚ್‌ಡಬ್ಲ್ಯೂಪಿ 1991, ದಿನಾಂಕ 20.09.1994ರ ಮೂಲಕ ಹೊರಡಿಸಲಾಗಿತ್ತು. ಆ ತರುವಾಯ, ಸರ್ಕಾರವು ರಾಜ್ಯಕ್ಕೆ ಭೇಟಿ ನೀಡುವ ಗಣ್ಯರಿಗೆ ಆತಿಥ್ಯವನ್ನು ವಿಸ್ತರಿಸುವ ಸಂಬಂಧದಲ್ಲಿ ಸೇರ್ಪಡೆಗಳನ್ನು ಮಾಡಿದ್ದು, ಅವುಗಳನ್ನು ಸರ್ಕಾರವು ಸೂಚಿಪಟ್ಟಿಯಲ್ಲಿ ಸೇರಿಸಿದೆ. ಅಲ್ಲದೆ, ರಾಜ್ಯ ಆದ್ಯತಾ ಸೂಚಿ ಪಟ್ಟಿಗೆ ಮತ್ತಷ್ಟು ಸೇರ್ಪಡೆಗಳನ್ನು ಸೂಕ್ತ ಸ್ಥಾನಗಳಲ್ಲಿ ಅಳವಡಿಸಲಾಗಿದೆ. ಹೀಗಾಗಿ ಕರ್ನಾಟಕದಲ್ಲಿ ರಾಜ್ಯ ಆತಿಥ್ಯವನ್ನು ನೀಡಬೇಕಾಗಿರುವ ಗಣ್ಯ ವ್ಯಕ್ತಿಗಳ ಕ್ರೋಢೀಕೃತ ಪಟ್ಟಿಯನ್ನು ಮತ್ತು ನವೀಕರಿಸಿರುವ ಆದ್ಯತಾ ಸೂಚಿ ಪಟ್ಟಿಯನ್ನು ಮಾಹಿತಿಗಾಗಿ ಪ್ರಕಟಿಸಲಾಗಿದೆ.

# ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡುವ ಗಣ್ಯ ವ್ಯಕ್ತಿಗಳಿಗೆ ರಾಜ್ಯ ಆತಿಥ್ಯ ನೀಡುವ ಕುರಿತು ಮಾರ್ಗಸೂಚಿಗಳು

*****

| | | |
|---|---|---|
| **(1)** | | ರಾಜ್ಯಕ್ಕೆ ಭೇಟಿ ನೀಡುವ ಗಣ್ಯ ವ್ಯಕ್ತಿಗಳನ್ನು ಮೂರು ಪ್ರವರ್ಗಗಳಾಗಿ ವರ್ಗೀಕರಿಸಲಾಗಿದೆ, ಎಂದರೆ:- |
| | (1) | ರಾಜ್ಯ ಅತಿಥಿಗಳು |
| | (2) | ಪಾವತಿ ರಹಿತ ಅತಿಥಿಗಳು ಮತ್ತು |
| | (3) | ಪಾವತಿ ಅತಿಥಿಗಳು. |
| | | **ರಾಜ್ಯ ಅತಿಥಿಗಳು** |
| **(2)** | (ಎ) | ಈ ಮುಂದೆ ಹೇಳಿರುವ ಗಣ್ಯರು, ಅವರು ರಾಜ್ಯಕ್ಕೆ ನೀಡುವ ಭೇಟಿಗಳು ಅಧಿಕೃತವಾಗಿರಲಿ ಅಥವಾ ಅನಧಿಕೃತವಾಗಿರಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಅವರು ರಾಜ್ಯಕ್ಕೆ ಭೇಟಿ ನೀಡಿದಾಗಲೆಲ್ಲಾ ಅವರುಗಳನ್ನು ರಾಜ್ಯ ಅತಿಥಿಗಳೆಂದು ಪರಿಗಣಿಸಲಾಗುವುದು:- |
| | 1. | ಭಾರತದ ರಾಷ್ಟ್ರಪತಿ |
| | 2. | ಭಾರತದ ಉಪರಾಷ್ಟ್ರಪತಿ |
| | 3. | ಭಾರತದ ಪ್ರಧಾನ ಮಂತ್ರಿ |
| | 4. | ಭಾರತದ ಮುಖ್ಯ ನ್ಯಾಯಮೂರ್ತಿ |
| | 5. | ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳೂ ಒಳಗೊಂಡಂತೆ ಇತರ ರಾಜ್ಯಗಳ ರಾಜ್ಯಪಾಲರುಗಳು. |
| | 6. | ಭಾರತದ ಮಾಜಿ ರಾಷ್ಟ್ರಪತಿಗಳು |
| | 7. | ಭಾರತದ ಮಾಜಿ ಪ್ರಧಾನ ಮಂತ್ರಿಗಳು |
| | 8. | ಭಾರತದ ಮಾಜಿ ಉಪರಾಷ್ಟ್ರಪತಿಗಳು |
| | 9. | ಕರ್ನಾಟಕದ ಮಾಜಿ ರಾಜ್ಯಪಾಲರುಗಳು |
| | 10. | ಭಾರತ ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶರುಗಳು |
| | 11. | ಉಚ್ಚ ನ್ಯಾಯಾಲಯಗಳ ಮುಖ್ಯ ನ್ಯಾಯಮೂರ್ತಿ |
| | 12. | ಇತರ ರಾಜ್ಯಗಳ ಮುಖ್ಯಮಂತ್ರಿಗಳು |
| | 13. | ಸರ್ವೋಚ್ಚ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಮೂರ್ತಿಗಳು |
| | 14. | ಭಾರತ ರತ್ನ ಪ್ರಶಸ್ತಿ ಪುರಸ್ಕೃತರು. |
| | **(ಬಿ)** | ಮೇಲೆ ಹೇಳಿರುವ ಗಣ್ಯ ವ್ಯಕ್ತಿಗಳ ಜೊತೆಯಲ್ಲಿ ಆಗಮಿಸುವ ಅವರ ಕುಟುಂಬದ ಸದಸ್ಯರುಗಳು, ಅವರ ಆಪ್ತ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಸಹ ರಾಜ್ಯದ ಅತಿಥಿಗಳೆಂದು ಪರಿಗಣಿಸಲಾಗುವುದು. |
| (3) | (ಎ) | **ಈ ಮುಂದೆ ಹೇಳಿರುವ ಗಣ್ಯರು ಅಧಿಕೃತ ಕರ್ತವ್ಯದ ಮೇಲೆ ರಾಜ್ಯಕ್ಕೆ ಭೇಟಿ ನೀಡಿದಾಗಲೆಲ್ಲಾ ಅವರನ್ನು ರಾಜ್ಯ ಅತಿಥಿಗಳೆಂದು ಪರಿಗಣಿಸಲಾಗುವುದು.** |
| | 1. | ಲೋಕಸಭಾಧ್ಯಕ್ಷರು ಮತ್ತು ಉಪಸಭಾಧ್ಯಕ್ಷರು |
| | 2. | ಭಾರತ ಸರ್ಕಾರದ ಸಚಿವ ಸಂಪುಟದ ಸಚಿವರು, ರಾಜ್ಯ ಸಚಿವರು ಮತ್ತು ಉಪಸಚಿವರು |
| | 3. | ಲೋಕಸಭೆಯ ಮತ್ತು ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕರು |
| | 4. | ರಾಜ್ಯ ಸಭೆಯ ಉಪಸಭಾಪತಿ |
| | 5. | **** NITI ಆಯೋಗದ ಉಪಾಧ್ಯಕ್ಷರು ಮತ್ತು ಸದಸ್ಯರುಗಳು** |
| | 6. | ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರು |

| | | |
|---|---|---|
| | 7. | ಭಾರತ ರಿಸರ್ವ್ ಬ್ಯಾಂಕಿನ ಗವರ್ನರ್ |
| | 8. | ಹಣಕಾಸು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳು. |
| | 9. | ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರುಗಳು. |
| | 10. | ಪರಿಶಿಷ್ಟ ಜಾತಿಗಳ ಮತ್ತು ಪರಿಶಿಷ್ಟ ಪಂಗಡಗಳ ಆಯುಕ್ತರು. |
| | 11. | ಕಾರ್ಮಿಕ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳು |
| | 12. | ಭಾರತ ಸರ್ಕಾರದ ಕಾರ್ಯದರ್ಶಿಗಳು ಮತ್ತು ವಿಶೇಷ ಕಾರ್ಯದರ್ಶಿಗಳು |
| | 13. | ಇತರ ರಾಜ್ಯ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು. |
| | 14. | ಅಧ್ಯಕ್ಷರು, ಅಣುಶಕ್ತಿ ಆಯೋಗ |
| | 15. | ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ, ಲೋಕಸಭೆ |
| | 16. | ಅಧ್ಯಕ್ಷರು, ಅಂದಾಜುಗಳ ಸಮಿತಿ, ಲೋಕಸಭೆ |
| | 17. | ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು. ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು. |
| | 18. | ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು. |
| | 19. | ಅಧ್ಯಕ್ಷರು, ಭಾರತ ಪತ್ರಿಕಾ ಪರಿಷತ್ತು |
| | 20. | ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು. |
| | 21. | ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು. |
| | 22. | ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರು. |
| | 23. | ಇತರ ರಾಜ್ಯಗಳ ವಿಧಾನ ಪರಿಷತ್ತುಗಳ ಸಭಾಪತಿ ಮತ್ತು ಉಪ ಸಭಾಪತಿ |
| | 24. | ಇತರ ರಾಜ್ಯಗಳ ವಿಧಾನ ಸಭಾಧ್ಯಕ್ಷರು ಮತ್ತು ಉಪ ಸಭಾಧ್ಯಕ್ಷರು |
| | 25. | 14ನೇ ಹಣಕಾಸು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು |
| | 26. | ಕರ್ನಾಟಕದಲ್ಲಿ ಬರ ಮತ್ತು ಪ್ರವಾಹ ಪರಿಸ್ಥಿತಿಯ ಅಧ್ಯಯನಕ್ಕಾಗಿ ಭೇಟಿ ನೀಡುವ ಕೇಂದ್ರ ಅಧ್ಯಯನ ತಂಡ |
| | 27. | ಕೃಷ್ಣ ಜಲವಿವಾದ ನ್ಯಾಯ ಮಂಡಳಿಯ ಅಧ್ಯಕ್ಷರು |
| | 28. | ಕೇಂದ್ರ ಅಪೀಲು ನ್ಯಾಯ ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರು. |
| | 29. | ಇತರ ರಾಜ್ಯಗಳ ಉಪ–ಮುಖ್ಯಮಂತ್ರಿಗಳು |
| | 30. | ಅಧ್ಯಕ್ಷರು, ಕೇಂದ್ರ ಸಮಾಜ ಕಲ್ಯಾಣ ಮಂಡಲಿ. |
| | 31. | ಅಧ್ಯಕ್ಷರು, ರಾಷ್ಟ್ರೀಯ ಮಕ್ಕಳ ಹಕ್ಕುಗಳ ಸಂರಕ್ಷಣಾ ಆಯೋಗ |
| | 32. | ಅಧ್ಯಕ್ಷರು, ಸ್ಪರ್ಧಾ ಅಪೀಲು ನ್ಯಾಯಮಂಡಲಿ, ನವದೆಹಲಿ |
| | 33. | ಅಧ್ಯಕ್ಷರು, ಕೇಂದ್ರ ಅಧಿಕಾರಯುತ ಸಮಿತಿ. |
| | 34. | ಅಧ್ಯಕ್ಷರು, ಕೇಂದ್ರ ಜಾಗೃತ ಆಯೋಗ. |
| | 35. | ಅಧ್ಯಕ್ಷರು, ವಿದ್ಯುಚ್ಛಕ್ತಿ ಅಪೀಲು ನ್ಯಾಯಮಂಡಲಿ, ಭಾರತ ಸರ್ಕಾರದ ವಿದ್ಯುಚ್ಛಕ್ತಿ ಮಂತ್ರಾಲಯ, ನವದೆಹಲಿ |
| | 36. | ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು. |
| | 37. | ಕೇಂದ್ರ ಲೋಕ ಸೇವಾ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು |
| | 38. | ಕೇಂದ್ರ ಕ್ಯಾಬಿನೆಟ್ ಕಾರ್ಯದರ್ಶಿ ಅಥವಾ ಕೇಂದ್ರ ಕ್ಯಾಬಿನೆಟ್ ಮಂತ್ರಿಗಳ ದರ್ಜೆಗೆ ಸಮಾನ ದರ್ಜೆ ಹೊಂದಿರುವ ಸರ್ಕಾರೇತರರು. |
| | 39. | ಇತರ ರಾಜ್ಯಗಳ ಲೋಕಾಯುಕ್ತರು. |

….3

| | | |
|---|---|---|
| | 40. | ಅಧ್ಯಕ್ಷರು, ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ, ಭಾರತ ಸರ್ಕಾರ, ನವದೆಹಲಿ |
| | 41. | ಪೀಠಾಸೀನ ಅಧಿಕಾರಿ, ಸೈಬರ್ ವಿನಿಯಮ ಅಪೀಲು ನ್ಯಾಯ ಮಂಡಲಿ, ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ ಮಂತ್ರಾಲಯ |
| | 42. | ಅಧ್ಯಕ್ಷರು, ಸಶಸ್ತ್ರ ಪಡೆಗಳ ನ್ಯಾಯಮಂಡಲಿ, ನವದೆಹಲಿ |
| | 43. | ಇತರ ರಾಜ್ಯಗಳ ಉಪ-ಲೋಕಾಯುಕ್ತರು |
| | 44. | ಭಾರತದಲ್ಲಿನ ಇತರ ರಾಜ್ಯಗಳ ರಾಜ್ಯ ಚುನಾವಣಾ ಆಯುಕ್ತರುಗಳು |
| | 45. | *** ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾನ್ಯ ಉಪಾಧ್ಯಕ್ಷರು ಮತ್ತು ಸದಸ್ಯರು.** |
| | 46. | *** ಅಧ್ಯಕ್ಷರು, ಸಿಬ್ಬಂದಿ ಆಯ್ಕೆ ಸಮಿತಿ, ಭಾರತ ಸರ್ಕಾರ, ನವದೆಹಲಿ** |
| | 47. | *** ಅಧ್ಯಕ್ಷರು, ಅಡ್ವಾನ್ಸ್ ರೂಲಿಂಗ್ಸ್ ಪ್ರಾಧಿಕಾರ (ಆದಾಯ ತೆರಿಗೆ)** |
| | 48. | ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ವಿಶೇಷ ಆದೇಶದ ಮೇರೆಗೆ ಒಂದು ನಿರ್ದಿಷ್ಟ ಭೇಟಿಗಾಗಿ ಆಗಮಿಸುವ ಯಾವುದೇ ಗಣ್ಯ ವ್ಯಕ್ತಿಗಳು. |
| **<u>ಸೂಚನೆ:</u>** | 1. | **ಕ್ರ.ಸಂ. 5 ** ತಿದ್ದುಪಡಿಯ ಕಡತ ಸಂಖ್ಯೆ: ಸಿಆಸುಇ 114 ಹೆಚ್‌ಜಿಜಿ 2015, ದಿನಾಂಕ:29.07.2015.** |
| | 2. | **ಕ್ರ.ಸಂ. 45 * ತಿದ್ದುಪಡಿಯ ಕಡತ ಸಂಖ್ಯೆ: ಸಿಆಸುಇ 203 ಹೆಚ್‌ಜಿಜಿ 2013, ದಿನಾಂಕ:30.01.2014.** |
| | 3. | **ಕ್ರ.ಸಂ. 46 * ತಿದ್ದುಪಡಿಯ ಕಡತ ಸಂಖ್ಯೆ: ಸಿಆಸುಇ 213 ಹೆಚ್‌ಜಿಜಿ 2014, ದಿನಾಂಕ:28.01.2015.** |
| | 4. | **ಕ್ರ.ಸಂ. 47 * ತಿದ್ದುಪಡಿಯ ಕಡತ ಸಂಖ್ಯೆ: ಸಿಆಸುಇ 17 ಹೆಚ್‌ಜಿಜಿ 2015, ದಿನಾಂಕ:06.02.2015.** |
| **(4)** | | ರಾಜ್ಯ ಅತಿಥಿಗಳ ಜೊತೆಯಲ್ಲಿ ಆಗಮಿಸುವ ಅವರ ಕುಟುಂಬದ ಸದಸ್ಯರುಗಳನ್ನು ಸಹ ರಾಜ್ಯ ಅತಿಥಿಗಳೆಂದೇ ಪರಿಗಣಿಸಲಾಗುವುದು. ಕುಟುಂಬ ಎಂಬುದರಲ್ಲಿ ರಾಜ್ಯ ಅತಿಥಿಗಳ ಪತ್ನಿ / ಪತಿ ಮತ್ತು ರಾಜ್ಯ ಅತಿಥಿಗಳೊಂದಿಗೆ ವಾಸಿಸುತ್ತಿರುವ ಮತ್ತು ಅವರ ಮೇಲೆ ಸಂಪೂರ್ಣವಾಗಿ ಅವಲಂಬಿತರಾಗಿರುವ ಅವರ ಮಕ್ಕಳು ಹಾಗೂ ದತ್ತು ಮಗ ಮತ್ತು ಮಲ ಮಕ್ಕಳು ಒಳಗೊಳ್ಳುತ್ತಾರೆ. |
| | (ಬಿ) | ರಾಜ್ಯ ಅತಿಥಿಗಳು ಜೊತೆಯಲ್ಲಿ ಇಲ್ಲದೆ ರಾಜ್ಯಕ್ಕೆ ಭೇಟಿ ನೀಡುವ ಗಣ್ಯರ ಕುಟುಂಬದ ಸದಸ್ಯರುಗಳು ರಾಜ್ಯ ಆತಿಥ್ಯಕ್ಕೆ ಹಕ್ಕನ್ನು ಹೊಂದಿರುವುದಿಲ್ಲ. ಹಣ ಸಂದಾಯದ ಆಧಾರದ ಮೇಲೆ, ಲಭ್ಯತೆಗೆ ಹಾಗೂ ವಿವೇಚನಾಧಿಕಾರಕ್ಕೆ ಒಳಪಟ್ಟು, ಅವರಿಗೆ ಊಟ ಮತ್ತು ವಸತಿ ಒದಗಿಸಲಾಗುವುದು. ಇದನ್ನು ಹಕ್ಕೆಂದು ಕೋರುವಂತಿಲ್ಲ. |
| **(5)** | | **ಈ ಮುಂದಿನ ಗಣ್ಯವ್ಯಕ್ತಿಗಳು ರಾಜ್ಯ ಸರ್ಕಾರದ ಆಹ್ವಾನದ ಮೇಲೆ ಆಗಮಿಸಿದ್ದಾಗ ಮಾತ್ರ ಅವರಿಗೆ ರಾಜ್ಯ ಅತಿಥಿಗಳ ಸೌಲಭ್ಯಗಳನ್ನು ಒದಗಿಸಲಾಗುವುದು:** |
| | 1. | **ಇತರ ರಾಜ್ಯಗಳ ಸಚಿವರುಗಳು, ರಾಜ್ಯ ಸಚಿವರುಗಳು ಮತ್ತು ಉಪಸಚಿವರುಗಳು** |
| | 2. | ಫುಲ್ ಜನರಲ್‌ನ ದರ್ಜೆಯ ಅಥವಾ ತತ್ಸಮಾನ ದರ್ಜೆ ಹೊಂದಿರುವ (ಸೇನಾಪಡೆ, ವಾಯುಪಡೆ ಮತ್ತು ನೌಕಾಪಡೆ) ಸಿಬ್ಬಂದಿ ಮುಖ್ಯಸ್ಥರು |
| | 3. | ಕೇಂದ್ರ ಸರ್ಕಾರದ ಮತ್ತು ಇತರ ರಾಜ್ಯಗಳ ವಿಧಾನಸಭೆ/ ವಿಧಾನಪರಿಷತ್ತುಗಳ ಸರ್ಕಾರಿ ಮುಖ್ಯ ಸಚೇತಕರು ಮತ್ತು ಕೇಂದ್ರದ ಉಪ ಮುಖ್ಯ ಸಚೇತಕರು |
| | 4. | ಇತರ ರಾಜ್ಯಗಳ ವಿಧಾನಮಂಡಲದ ವಿರೋಧ ಪಕ್ಷಗಳ ನಾಯಕರುಗಳು. |
| | 5. | ಕೇಂದ್ರಾಡಳಿತ ಪ್ರದೇಶಗಳ ಸಚಿವರು ಮತ್ತು ಉಪ ಸಚಿವರು. |
| | 6. | ಇತರ ರಾಜ್ಯಗಳ ಉಚ್ಚನ್ಯಾಯಾಲಯಗಳ ನ್ಯಾಯಾಧೀಶರುಗಳು. |

….4

| | | |
|---|---|---|
| (೬) | | ರಾಜ್ಯ ಅತಿಥಿಗಳಿಗೆ ಈ ಮುಂದಿನ ಸೌಲಭ್ಯಗಳನ್ನು ಒದಗಿಸಲಾಗುವುದು: |
| | (ಎ) | ರಾಜ್ಯ ಅತಿಥಿಗಳೆಂದು ಪರಿಗಣಿಸಲ್ಪಟ್ಟಿರುವ ಗಣ್ಯವ್ಯಕ್ತಿಗಳಿಗೆ ಸರ್ಕಾರದ ಅತಿಥಿಗೃಹಗಳಲ್ಲಿ ಊಟ-ವಸತಿಯ ಅವಕಾಶ ಕಲ್ಪಿಸಲಾಗುವುದು ಮತ್ತು ಸರ್ಕಾರಿ ಅತಿಥಿ ಗೃಹಗಳು ಇಲ್ಲದಿರುವ ಕಡೆಗಳಲ್ಲಿ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಇರುವ ಸರ್ಕ್ಯೂಟ್ ಹೌಸ್‌ಗಳು/ ನೀರಿಕ್ಷಣಾ ಮಂದಿರಗಳಲ್ಲಿ (ಯಾವುದೇ ವಿಧದ ಮಾದಕ ಪಾನೀಯಗಳನ್ನು ಹೊರತುಪಡಿಸಿದ ಭೋಜನವನ್ನು) ಅಂಥ ಸೌಲಭ್ಯಗಳನ್ನು ಒದಗಿಸಲಾಗುವುದು. |
| | (ಬಿ) | ರಾಜ್ಯ ಅತಿಥಿಗಳಿಗೆ ಬೆಂಗಳೂರಿನಲ್ಲಿ ಕುಮಾರ ಕೃಪ ಅತಿಥಿ ಗೃಹದಲ್ಲಿ (ಪ್ರಧಾನ ಕಟ್ಟಡ) ಮತ್ತು ಬಾಲಬ್ರೂಯಿ ಅತಿಥಿ ಗೃಹದಲ್ಲಿ ವಾಸ್ತವ್ಯವನ್ನು ಕಲ್ಪಿಸಲಾಗುವುದು. |
| | (ಸಿ) | ರಾಜ್ಯ ಅತಿಥಿಗಳೆಂದು ಪರಿಗಣಿಸಲ್ಪಟ್ಟ ಗಣ್ಯರುಗಳಿಗೆ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿನ ಸರ್ಕಾರಿ ಅತಿಥಿ ಗೃಹಗಳಲ್ಲಿ ಮತ್ತು ಸರ್ಕ್ಯೂಟ್ ಹೌಸ್‌ಗಳಲ್ಲಿ/ ನಿರೀಕ್ಷಣಾ ಮಂದಿರಗಳಲ್ಲಿ ಸ್ಥಳಾವಕಾಶವು ಲಭ್ಯವಿಲ್ಲದಿದ್ದರೆ, ಅವರಿಗೆ ಹೋಟೆಲುಗಳಲ್ಲಿ ವಾಸ್ತವ್ಯ ಕಲ್ಪಿಸಲಾಗುವುದು ಮತ್ತು ಊಟ, ವಸತಿ, ಮುಂತಾದ ಎಲ್ಲ ವೆಚ್ಚಗಳನ್ನು ರಾಜ್ಯ ಸರ್ಕಾರವು ಭರಿಸುವುದು. |
| | (ಡಿ) | ರಾಜ್ಯ ಅತಿಥಿಗಳ ಸಂಬಂಧದಲ್ಲಿ ವಸತಿ ಮತ್ತು ಸಾರಿಗೆ ಸೌಲಭ್ಯದ ಜೊತೆಗೆ, ಈ ಮುಂದಿನ ಬಾಬ್ತುಗಳ ಮೇಲಿನ ವೆಚ್ಚಗಳನ್ನು, ರಾಜ್ಯ ಸರ್ಕಾರವೇ ಭರಿಸಿ ಅವುಗಳನ್ನು ಉಚಿತವಾಗಿ ಒದಗಿಸುತ್ತದೆ:- |
| | i | ರಾಜ್ಯ ಅತಿಥಿಗಳ ಪತ್ರಿಕಾಗೋಷ್ಠಿಯ ಅಥವಾ ಸಂದರ್ಶನದ ಸಂದರ್ಭದಲ್ಲಿ ಆತಿಥ್ಯ |
| | ii | ದಿನ ಪತ್ರಿಕೆಗಳ ಸರಬರಾಜು |
| | iii | ಹೂವಿನ ಹಾರಗಳ ಮತ್ತು ಹೂಗುಚ್ಛಗಳ ಅರ್ಪಣೆ |
| | iv | ವೈದ್ಯಕೀಯ ಉಪಚಾರ. |
| | v | ಲಗೇಜು, ಮುಂತಾದವುಗಳನ್ನು ವಾಹನಗಳಿಗೆ ತುಂಬುವುದಕ್ಕಾಗಿ ಮತ್ತು ಇಳಿಸುವುದಕ್ಕಾಗಿ ಕಾರ್ಮಿಕರ ವೆಚ್ಚಗಳು. |
| | vi | ರಾಜ್ಯ ಅತಿಥಿಗಳಿಗೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ವಿವಿಐಪಿ ಲಾಂಜ್‌ನಲ್ಲಿ ಉಪಹಾರ. |
| (೭) | | ರಾಜ್ಯ ಅತಿಥಿಗಳನ್ನು ಸರ್ಕಾರಿ ವೆಚ್ಚದಲ್ಲಿ ಸತ್ಕರಿಸುವ ಅವಧಿಯು ಸಾಮಾನ್ಯವಾಗಿ ಐದು ದಿನಗಳನ್ನು ಮೀರತಕ್ಕದ್ದಲ್ಲ. |
| (೮) | | ಪೋಲೀಸರು ಭದ್ರತೆಯನ್ನು ಒದಗಿಸುವರು (ಬೆದರಿಕೆ ಮಾಹಿತಿಯನ್ನು ಅವಲಂಬಿಸಿ ಪೋಲೀಸರು ನಿರ್ಧರಿಸುವಂತೆ). |
| | | **ಸಾರಿಗೆ** |
| (೯) | (i) | ರಾಜ್ಯ ಅತಿಥಿಗಳೆಂದು ಪರಿಗಣಿಸಲ್ಪಟ್ಟ ವ್ಯಕ್ತಿಗಳು ತಮ್ಮ ಅಧಿಕೃತ ಕರ್ತವ್ಯದ ಮೇಲೆ ಭೇಟಿ ನೀಡಿದ್ದ ಸಂದರ್ಭದಲ್ಲಿ, ರಾಜ್ಯದಲ್ಲಿ ನಗರ/ ಪಟ್ಟಣದ ನಗರ ಪಾಲಿಕೆಯ ವ್ಯಾಪ್ತಿಯೊಳಗೆ ಸ್ಥಳೀಯ ಬಳಕೆಗಾಗಿ ಅವರಿಗೆ ಉಚಿತವಾಗಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ರಾಜ್ಯದೊಳಗಿನ ಸ್ಥಳಗಳಿಗೆ ಪ್ರಯಾಣಿಸುವುದಕ್ಕಾಗಿ ಮತ್ತು ರಾಜ್ಯಕ್ಕೆ ಸಂಬಂಧಿಸಿದ ಅಧಿಕೃತ ವ್ಯವಹಾರಗಳು ರಾಜ್ಯದ ಗಡಿಯಿಂದ ೧೫೦ ಕಿ.ಮೀ. ಗಳೊಳಗೆ ಇರುವಂಥ ರಾಜ್ಯದ ಹೊರಗಿನ ಇತರ ಸ್ಥಳಗಳಲ್ಲಿ ಇದ್ದರೆ ಅಲ್ಲಿಗೂ ಸಹ ಉಚಿತವಾಗಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ರಾಷ್ಟ್ರಪತಿ, ಉಪ ರಾಷ್ಟ್ರಪತಿ, ಪ್ರಧಾನಮಂತ್ರಿ, ಭಾರತ ಮುಖ್ಯ ನ್ಯಾಯಮೂರ್ತಿಗಳು, ಕೇಂದ್ರ ಮಂತ್ರಿಗಳು, ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಉಚ್ಚನ್ಯಾಯಾಲಯಗಳ ಮುಖ್ಯ ನ್ಯಾಯಮೂರ್ತಿಗಳ ಸಂದರ್ಭದಲ್ಲಿ, ಅವರ ಭೇಟಿಯು ಕಟ್ಟುನಿಟ್ಟಾಗಿ ಅಧಿಕೃತ ಭೇಟಿಯಾಗಿಲ್ಲದಿದ್ದರೂ ಸಹ ಅವರುಗಳಿಗೆ ರಾಜ್ಯದ ಒಳಗೆ ಮತ್ತು ರಾಜ್ಯದ ಹೊರಗಿರುವ ಸ್ಥಳಗಳಾದ ತಿರುಪತಿ, ಪುಟ್ಟಪರ್ತಿ ಮತ್ತು ಊಟಿ ಮುಂತಾದ ಸ್ಥಳಗಳಿಗೆ ಹೋಗಿಬರಲು ಉಚಿತವಾಗಿ ಕಾರುಗಳನ್ನು ಒದಗಿಸಲಾಗುವುದು. |

| | | |
|---|---|---|
| | (ii) | ರಾಜ್ಯ ಅತಿಥಿಗಳೆಂದು ಪರಿಗಣಿಸಲ್ಪಟ್ಟ ವ್ಯಕ್ತಿಗಳು ತಮ್ಮ ಖಾಸಗೀ ವ್ಯವಹಾರದ ಸಂಬಂಧದಲ್ಲಿ ರಾಜ್ಯದೊಳಗಿನ ವಿವಿಧ ಸ್ಥಳಗಳಿಗೆ ಮತ್ತು ರಾಜ್ಯದ ಗಡಿಯಿಂದ ಹೊರಗೆ 150 ಕಿ.ಮೀ. ಗಳೊಳಗಿನ ಸ್ಥಳಗಳಿಗೆ ಭೇಟಿ ನೀಡುವಂತಿದ್ದರೆ, ಅದಕ್ಕೆ ಅವರು, ಕಾಲಕಾಲಕ್ಕೆ ಗೊತ್ತುಪಡಿಸುವ ದರಗಳಲ್ಲಿ ವೆಚ್ಚಗಳನ್ನು ಸಂದಾಯ ಮಾಡುವಂತೆ ಅಗತ್ಯಪಡಿಸಲಾಗಿದೆ. ರಾಜ್ಯ ಸರ್ಕಾರದ ವಾಹನಗಳು ಲಭ್ಯವಿಲ್ಲದಿದ್ದರೆ, ನೇರ ಹಣ ಸಂದಾಯದ ಆಧಾರದ ಮೇಲೆ ಟ್ಯಾಕ್ಸಿಗಳನ್ನು ಒದಗಿಸಲಾಗುವುದು. |
| **ಪಾವತಿ ರಹಿತ ಅತಿಥಿಗಳು** | | |
| (10) | | ಸಾಂಸ್ಕೃತಿಕ ನಿಯೋಗದವರು, ಪತ್ರಿಕಾ ರಂಗದವರು, ಅಧಿಕೃತ ಅಧ್ಯಯನ ಅಥವಾ ಇತರ ತಂಡಗಳ ಗಣ್ಯ ವ್ಯಕ್ತಿಗಳು ಮತ್ತು ಸರ್ಕಾರದ ಯಾವುದೇ ನಿರ್ದಿಷ್ಟ ವ್ಯವಹಾರಕ್ಕಾಗಿ ವಿಶೇಷವಾಗಿ ಸರ್ಕಾರದಿಂದ ಆಹ್ವಾನಿತರಾದಂಥ ಇತರ ವ್ಯಕ್ತಿಗಳ ಭೇಟಿಯು ಸರ್ಕಾರದ ಒಂದು ನಿರ್ದಿಷ್ಟ ಇಲಾಖೆಗೆ ಅಥವಾ ಸಾಮಾನ್ಯವಾಗಿ ಸರ್ಕಾರಕ್ಕೆ ಪ್ರಯೋಜನಕಾರಿಯಾಗುವಂತಿದ್ದ ಸಂದರ್ಭದಲ್ಲಿ ಮಾತ್ರವೇ ಅವರನ್ನು ರಾಜ್ಯ ಅತಿಥಿಗಳೆಂದು ಪರಿಗಣಿಸಲಾಗುವುದು. ಅಂಥ ಪ್ರವರ್ಗದ ಸಂದರ್ಶಕರನ್ನು ಅತಿಥಿಗಳೆಂದು ಪರಿಗಣಿಸಲಾಗುವುದು. ಒಬ್ಬ ನಿರ್ದಿಷ್ಟ ಅತಿಥಿಯನ್ನು ರಾಜ್ಯ ಅತಿಥಿಯೆಂದು ಪರಿಗಣಿಸಬೇಕೇ ಅಥವಾ ಪಾವತಿ ರಹಿತ ಅತಿಥಿಯೆಂದು ಪರಿಗಣಿಸಬೇಕೇ ಎಂಬ ಪ್ರಶ್ನೆ ಬಂದಾಗ, ಅದನ್ನು ಪ್ರತಿಯೊಂದು ಪ್ರಕರಣಗಳಲ್ಲಿ ಸರ್ಕಾರದ ಸಂಬಂಧಪಟ್ಟ ಕಾರ್ಯದರ್ಶಿಯ ಶಿಫಾರಸ್ಸಿನ ಮೇಲೆ ಮುಖ್ಯ ಕಾರ್ಯದರ್ಶಿಯವರ ಅನುಮೋದನೆ ಪಡೆದು ಸರ್ಕಾರವು ನಿರ್ಣಯಿಸುತ್ತದೆ. |
| (11) | | ಪಾವತಿ ರಹಿತ ಅತಿಥಿಗಳಿಗೆ ಭದ್ರತಾ ವ್ಯವಸ್ಥೆಯನ್ನು ಮಾಡಲಾಗುವುದಿಲ್ಲ. |
| (12) | | ಪಾವತಿ ರಹಿತ ಅತಿಥಿಗಳೆಂದು ಪರಿಗಣಿಸಲಾಗಿರುವ ಗಣ್ಯ ವ್ಯಕ್ತಿಗಳಿಗೆ ಈ ಮುಂದಿನ ಸೌಲಭ್ಯಗಳನ್ನು ಒದಗಿಸಲಾಗುವುದು:- |
| | (i) | ಉಚಿತ ವಸತಿ ಮತ್ತು ಉಚಿತ ಊಟ (ಯಾವುದೇ ರೀತಿಯ ಮಾದಕ ಪಾನೀಯವನ್ನು ಹೊರತುಪಡಿಸಿ) |
| | (ii) | 9ನೇ ನಿಯಮದಲ್ಲಿ ಒಳಗೊಂಡ ಉಪಬಂಧಗಳಿಗೆ ಅನುಸಾರವಾಗಿ ಸಂಬಂಧಿಸಿದ ಇಲಾಖೆಯು ಒದಗಿಸಬೇಕಾದಂಥ ಉಚಿತ ಸಾರಿಗೆ. |
| | (iii) | ವೃತ್ತ ಪತ್ರಿಕೆಗಳ ಸರಬರಾಜು |
| | (iv) | ಲಗೇಜು ಮುಂತಾದವುಗಳನ್ನು ವಾಹನಗಳಿಗೆ ತುಂಬುವುದಕ್ಕಾಗಿ ಮತ್ತು ಇಳಿಸುವುದಕ್ಕಾಗಿ ಕೆಲಸಗಾರರಿಗೆ ಕೂಲಿ ವೆಚ್ಚಗಳು. |
| | (v) | ಸರ್ಕಾರದ ನಿರ್ದಿಷ್ಟ ಆದೇಶದ ಮೇರೆಗೆ ಯಾವುದೇ ಇತರ ಬಾಬ್ತುಗಳು. |
| **ಪಾವತಿ ಅತಿಥಿಗಳು** | | |
| (13) | | ರಾಜ್ಯ ಅತಿಥಿಗಳು ಮತ್ತು ಪಾವತಿ ರಹಿತ ಅತಿಥಿಗಳು ಮತ್ತು ಪ್ರಸಿದ್ಧ ವ್ಯಕ್ತಿಗಳ ಪ್ರವರ್ಗದ ಅಡಿಯಲ್ಲಿ ಬಾರದ ಸಂದರ್ಶಕರನ್ನು ಪಾವತಿ ಅತಿಥಿಗಳೆಂದು ಪರಿಗಣಿಸಲಾಗುವುದು. ಅಂತಹ ಅತಿಥಿಗಳಿಗೆ ಲಭ್ಯತೆಗೆ ಒಳಪಟ್ಟು, ಗೊತ್ತುಪಡಿಸಿರುವ ದರಗಳ ಸಂದಾಯದ ಮೇಲೆ ವಸತಿ ಮತ್ತು ಊಟದ ಸೌಲಭ್ಯಗಳನ್ನು ಒದಗಿಸಲಾಗುವುದು.<br>ಈ ಪ್ರವರ್ಗದಡಿಯಲ್ಲಿ ಬರುವಂತಹ ಸಂದರ್ಶಕರು ಮುಂಗಡ ಹಣ ಪಾವತಿಸಬೇಕು ಹಾಗೂ ನಿರ್ಗಮಿಸುವುದಕ್ಕೆ ಮುಂಚೆ ಎಲ್ಲ ಬಿಲ್ಲುಗಳನ್ನು ಸಂದಾಯ ಮಾಡಬೇಕು. |

| | | |
|---|---|---|
| | | **ದೂರವಾಣಿ ಶುಲ್ಕಗಳು** |
| (14) | | ರಾಜ್ಯ ಅತಿಥಿಯು ಮತ್ತು ಪಾವತಿ ರಹಿತ ಅತಿಥಿಯು ಮಾಡುವಂಥ ಸ್ಥಳೀಯ ದೂರವಾಣಿ ಕರೆಗಳಿಗೆ ಯಾವುದೇ ಶುಲ್ಕಗಳನ್ನು ಸಂದಾಯ ಮಾಡಬೇಕಾಗಿಲ್ಲ. ಪಾವತಿ ಸಹಿತ ಅತಿಥಿಗಳ ಸಂದರ್ಭದಲ್ಲಿ, ದೂರವಾಣಿ ಕರೆಗಳ ಶುಲ್ಕಗಳನ್ನು ಅವರಿಂದ ಮುಂಗಡವಾಗಿಯೇ ವಸೂಲು ಮಾಡಿಕೊಳ್ಳಬೇಕು. |
| (15) | | ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಸೂಕ್ತ ಮತ್ತು ಸಮರ್ಪಕ ಕಾರಣಗಳಿಗಾಗಿ ಈ ಯಾವುದೇ ನಿಯಮಗಳನ್ನು ವಿನಾಯಿತಿಗೊಳಿಸಬಹುದು. |

**ಸರ್ಕಾರದ ಉಪ ಕಾರ್ಯದರ್ಶಿ**
**ಡಿಪಿಎಆರ್ (ರಾಜ್ಯ ಶಿಷ್ಟಾಚಾರ)**

….7

| | | ಕರ್ನಾಟಕ ರಾಜ್ಯದಲ್ಲಿ ಆದ್ಯತಾ ಸೂಚಿ |
|---|---|---|
| 1. | | ರಾಷ್ಟ್ರಪತಿ |
| 2. | | ಉಪ ರಾಷ್ಟ್ರಪತಿ |
| 3. | | ಪ್ರಧಾನ ಮಂತ್ರಿ |
| 4. | | ಕರ್ನಾಟಕ ರಾಜ್ಯಪಾಲರು |
| 5. | | ಮಾಜಿ ರಾಷ್ಟ್ರಪತಿಗಳು<br>ಉಪ ಪ್ರಧಾನಮಂತ್ರಿ |
| 6. | | ಭಾರತದ ಮುಖ್ಯ ನ್ಯಾಯಮೂರ್ತಿ<br>ಲೋಕಸಭಾಧ್ಯಕ್ಷರು |
| 7. | | ಕೇಂದ್ರ ಕ್ಯಾಬಿನೆಟ್ ದರ್ಜೆಯ ಸಚಿವರು<br>ಕರ್ನಾಟಕ ಮುಖ್ಯಮಂತ್ರಿಗಳು<br>**** NITI ಆಯೋಗದ ಉಪಾಧ್ಯಕ್ಷರು**<br>ಮಾಜಿ ಪ್ರಧಾನ ಮಂತ್ರಿಗಳು<br>ರಾಜ್ಯಸಭೆ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕರು<br>ಭಾರತರತ್ನ ಪ್ರಶಸ್ತಿ ಪುರಸ್ಕೃತರು |
| 8. | | ಭಾರತಕ್ಕೆ ಕಳುಹಿಸಲ್ಪಟ್ಟಿರುವ ಕಾಮನ್‌ವೆಲ್ತ್ ದೇಶಗಳ ವಿಶೇಷ ರಾಯಭಾರಿಗಳು ಮತ್ತು ಸಂಪೂರ್ಣ ಅಧಿಕಾರವುಳ್ಳ ರಾಯಭಾರಿ ಹಾಗೂ ಹೈಕಮಿಷನರುಗಳು<br>ಇತರ ರಾಜ್ಯಗಳ ಮುಖ್ಯಮಂತ್ರಿಗಳು<br>ಕರ್ನಾಟಕದ ಮಾಜಿ ರಾಜ್ಯಪಾಲರುಗಳು<br>ಇತರ ರಾಜ್ಯಗಳ ರಾಜ್ಯಪಾಲರುಗಳು |
| 9. | | ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳು |
| 10. | | ರಾಜ್ಯಸಭೆಯ ಉಪ ಸಭಾಪತಿ<br>ಕರ್ನಾಟಕ ರಾಜ್ಯದ ಉಪ ಮುಖ್ಯಮಂತ್ರಿಗಳು<br>ಉಪ ಸಭಾಧ್ಯಕ್ಷರು, ಲೋಕಸಭೆ<br>NITI ಆಯೋಗದ ಸದಸ್ಯರು<br>ಕೇಂದ್ರ ಸರ್ಕಾರದ ರಾಜ್ಯ ಸಚಿವರು |
| 11. | | ಭಾರತದ ಅಟಾರ್ನಿ ಜನರಲ್<br>ಸಚಿವ ಸಂಪುಟ ಕಾರ್ಯದರ್ಶಿ<br>ಮುಖ್ಯ ಚುನಾವಣಾ ಆಯುಕ್ತರು<br>ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು |
| 12. | | ಫುಲ್ ಜನರಲ್‌ರ ದರ್ಜೆಯ ಅಥವಾ ತತ್ಸಮಾನವಾದ ದರ್ಜೆಯನ್ನು ಹೊಂದಿರುವ ಸಿಬ್ಬಂದಿ ಮುಖ್ಯಸ್ಥರುಗಳು |
| 13. | | ಭಾರತಕ್ಕೆ ಕಳುಹಿಸಲ್ಪಟ್ಟಿರುವ ವಿಶೇಷ ರಾಯಭಾರಿಗಳು ಮತ್ತು ಸಚಿವರ ಪೂರ್ಣಾಧಿಕಾರವುಳ್ಳ ರಾಯಭಾರಿ |
| 14. | | ಸಭಾಪತಿ, ಕರ್ನಾಟಕ ವಿಧಾನಪರಿಷತ್ತು<br>ಕರ್ನಾಟಕ ವಿಧಾನ ಸಭಾಧ್ಯಕ್ಷರು<br>ಕರ್ನಾಟಕ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು<br>ಕರ್ನಾಟಕ ಲೋಕಾಯುಕ್ತ |

…..8

| | | |
|---|---|---|
| 15. | | ಕರ್ನಾಟಕದ ಕ್ಯಾಬಿನೆಟ್ ದರ್ಜೆ ಸಚಿವರು<br>ಕೇಂದ್ರ ಸರ್ಕಾರದ ಉಪಸಚಿವರುಗಳು<br>ಮಾಜಿ ಮುಖ್ಯಮಂತ್ರಿಗಳು<br>ಉಚ್ಚನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಮೂರ್ತಿಗಳು<br>ಕರ್ನಾಟಕ ವಿಧಾನಮಂಡಲದ ವಿರೋಧಪಕ್ಷದ ನಾಯಕರು<br>ಬೆಂಗಳೂರಿನ ಮೇಯರ್ |
| 16. | | ಲೆಫ್ಟಿನೆಂಟ್ ಜನರಲ್ ದರ್ಜೆಯ ಅಥವಾ ಅದಕ್ಕೆ ಸಮಾನವಾದ ದರ್ಜೆಯನ್ನು ಹೊಂದಿರುವ ಸಿಬ್ಬಂದಿಯ ಸ್ಥಾನಾಪನ್ನ ಮುಖ್ಯಸ್ಥರುಗಳು |
| 17. | | ಅಧ್ಯಕ್ಷರು, ಕೇಂದ್ರ ಆಡಳಿತ ನ್ಯಾಯಮಂಡಳಿ<br>ಅಧ್ಯಕ್ಷರು, ಕರ್ನಾಟಕ ಆಡಳಿತ ನ್ಯಾಯಮಂಡಳಿ<br>ಅಧ್ಯಕ್ಷರು, ಅಲ್ಪಸಂಖ್ಯಾತರ ಆಯೋಗ<br>ಅಧ್ಯಕ್ಷರು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳ ಆಯೋಗ<br>ಅಧ್ಯಕ್ಷರು, ಕೇಂದ್ರ ಲೋಕಸೇವಾ ಆಯೋಗ<br>ಇತರ ರಾಜ್ಯಗಳ ಉಚ್ಚನ್ಯಾಯಾಲಯಗಳ ಮುಖ್ಯ ನ್ಯಾಯಮೂರ್ತಿಗಳು<br>ಕರ್ನಾಟಕ ಉಚ್ಚನ್ಯಾಯಾಲಯದ ಕಿರಿಯ ನ್ಯಾಯಾಧೀಶರು<br>ಉಪ ಲೋಕಾಯುಕ್ತ, ಕರ್ನಾಟಕ ರಾಜ್ಯ<br>ರಾಜ್ಯ ಚುನಾವಣಾ ಆಯುಕ್ತರು, ಕರ್ನಾಟಕ ಸಹಕಾರ ಚುನಾವಣಾ ಆಯುಕ್ತರು, ಕರ್ನಾಟಕ |
| 18. | | ಇತರ ರಾಜ್ಯಗಳ ಕ್ಯಾಬಿನೆಟ್ ದರ್ಜೆ ಸಚಿವರುಗಳು<br>ಅಧ್ಯಕ್ಷರು, ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿಗಳ ಆಯೋಗ<br>ಇತರ ರಾಜ್ಯ ವಿಧಾನ ಮಂಡಲಗಳ ಸಭಾಪತಿಗಳು ಮತ್ತು ಸಭಾಧ್ಯಕ್ಷರು<br>ಕರ್ನಾಟಕ ರಾಜ್ಯ ವಿಧಾನ ಮಂಡಲದ ಉಪಸಭಾಪತಿ ಮತ್ತು ಉಪಸಭಾಧ್ಯಕ್ಷರು<br>ಕರ್ನಾಟಕದ ಸರ್ಕಾರಿ ಮುಖ್ಯ ಸಚೇತಕರು<br>ವಿರೋಧ ಪಕ್ಷದ ಮುಖ್ಯ ಸಚೇತಕರು, ಕರ್ನಾಟಕ<br>ಕರ್ನಾಟಕ ರಾಜ್ಯ ಸಚಿವರುಗಳು |
| 19. | | ಕರ್ನಾಟಕ ರಾಜ್ಯದ ಉಪಸಚಿವರುಗಳು<br>ಅಧ್ಯಕ್ಷರು, ಜಿಲ್ಲಾಪಂಚಾಯತ್‌ಗಳು |
| 20. | | ಇತರ ರಾಜ್ಯಗಳ ವಿಧಾನ ಮಂಡಲಗಳ ಉಪ ಸಭಾಪತಿಗಳು ಮತ್ತು ಉಪ ಸಭಾಧ್ಯಕ್ಷರುಗಳು<br>ಕರ್ನಾಟಕ ಉಚ್ಚನ್ಯಾಯಾಲಯದ ಮಾಜಿ ನ್ಯಾಯಾಧೀಶರುಗಳು<br>ಇತರ ರಾಜ್ಯಗಳ ರಾಜ್ಯ ಸಚಿವರುಗಳು<br>ಇತರ ರಾಜ್ಯಗಳ ಉಚ್ಚನ್ಯಾಯಾಲಯಗಳ ಕಿರಿಯ ನ್ಯಾಯಾಧೀಶರುಗಳು |
| 21. | | ಸಂಸತ್ ಸದಸ್ಯರುಗಳು |
| 21. | (ಅ) | ಕರ್ನಾಟಕ ವಿಧಾನಸಭಾ ಸದಸ್ಯರುಗಳು<br>ಕರ್ನಾಟಕ ವಿಧಾನ ಪರಿಷತ್ ಸದಸ್ಯರುಗಳು |
| 22. | | ಇತರ ರಾಜ್ಯಗಳ ಉಪ ಸಚಿವರುಗಳು |
| 23. | | ಸೇನಾ ಕಮ್ಯಾಂಡರ್‌ಗಳು/ ಸೇನಾ ಸಿಬ್ಬಂದಿಯ ಅಥವಾ ಇತರ ಸೇವೆಗಳಲ್ಲಿನ ತತ್ಸಮಾನ ದರ್ಜೆಯ ಉಪ ಮುಖ್ಯಸ್ಥರುಗಳು<br>ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ/ ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಮತ್ತು ತತ್ಸಮಾನ ವೃಂದದ ಅಧಿಕಾರಿಗಳು, |

…..9

| | | |
|---|---|---|
| | | ರಾಜ್ಯ ಮುಖ್ಯ ಮಾಹಿತಿ ಆಯುಕ್ತರು<br>ಭಾಷಾ ಅಲ್ಪಸಂಖ್ಯಾತರ ಆಯುಕ್ತರು, ಭಾರತ ಸರ್ಕಾರ<br>ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯುಕ್ತರು, ಭಾರತ ಸರ್ಕಾರ<br>ಸದಸ್ಯರುಗಳು, ಅಲ್ಪಸಂಖ್ಯಾತರ ಆಯೋಗ, ಭಾರತ ಸರ್ಕಾರ.<br>ಸದಸ್ಯರು, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯೋಗ, ಭಾರತ ಸರ್ಕಾರ<br>ಫುಲ್ ಜನರಲ್ ದರ್ಜೆಯ ಅಥವಾ ತತ್ಸಮಾನ ದರ್ಜೆಯ ಅಧಿಕಾರಿಗಳು,<br>ಮಹಾ ಕಾರ್ಯದರ್ಶಿ/ ಕಾರ್ಯದರ್ಶಿ<br>ರಾಜ್ಯಸಭೆ/ ಲೋಕಸಭೆ<br>ಅಲ್ಪಸಂಖ್ಯಾತರ ಆಯೋಗದ ಕಾರ್ಯದರ್ಶಿ, ಭಾರತ ಸರ್ಕಾರ.<br>ರಾಷ್ಟ್ರಪತಿಗಳ ಕಾರ್ಯದರ್ಶಿ<br>ಪ್ರಧಾನ ಮಂತ್ರಿಗಳ ಕಾರ್ಯದರ್ಶಿ<br>ಕಾರ್ಯದರ್ಶಿ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯೋಗ, ಭಾರತ ಸರ್ಕಾರ.<br>ಭಾರತ ಸರ್ಕಾರದ ಕಾರ್ಯದರ್ಶಿಗಳು ಮತ್ತು ವಿಶೇಷ ಕಾರ್ಯದರ್ಶಿಗಳು (ಪದನಿಮಿತ್ತ ಹುದ್ದೆ ಹೊಂದಿರುವ ಅಧಿಕಾರಿಗಳನ್ನೂ ಒಳಗೊಂಡಂತೆ)<br>ಸಾಲಿಸಿಟರ್ ಜನರಲ್<br>ಉಪಾಧ್ಯಕ್ಷರು, ಕೇಂದ್ರ ಆಡಳಿತ ನ್ಯಾಯಮಂಡಳಿ/ ಕರ್ನಾಟಕ ಆಡಳಿತ ನ್ಯಾಯಮಂಡಳಿ |
| 24. | | ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ,<br>ಅರಣ್ಯಗಳ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ದಳದ ಮುಖ್ಯಸ್ಥರು ಹಾಗೂ ಅರಣ್ಯಗಳ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ,<br>ಲೆಫ್ಟಿನೆಂಟ್ ಜನರಲ್ ದರ್ಜೆಯ ಅಥವಾ ತತ್ಸಮಾನ ದರ್ಜೆಯ ಅಧಿಕಾರಿಗಳು |
| 25. | | ಭಾರತ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು ಮತ್ತು ಕರ್ನಾಟಕದ ತತ್ಸಮಾನ ದರ್ಜೆಯ ಅಧಿಕಾರಿಗಳು<br>ಹೆಚ್ಚುವರಿ ಸಾಲಿಸಿಟರ್ ಜನರಲ್<br>ಕರ್ನಾಟಕದ ಅಡ್ವೊಕೇಟ್ ಜನರಲ್<br>ಅಧ್ಯಕ್ಷರು, ಕರ್ನಾಟಕ ಲೋಕಸೇವಾ ಆಯೋಗ<br>ಅಧ್ಯಕ್ಷರು, ಆಮದು-ರಫ್ತು ಸುಂಕ ಆಯೋಗ<br>ಉಪ ರಾಯಭಾರಿ ಮತ್ತು ಕಾರ್ಯಾರ್ಥ ಹೈಕಮೀಷನರ್ ಎ-ಪೈಡ್ ಅಂಡ್ ಆಡ್-ಇಂಟೆರಿಮ್<br>ಉಪ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು<br>ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನಸಭೆಗಳ ಉಪ ಸಭಾಧ್ಯಕ್ಷರುಗಳು<br>ಮತ್ತು ಉಪಾಧ್ಯಕ್ಷರು, ದೆಹಲಿ ಮೆಟ್ರೋಪಾಲಿಟನ್ ಕೌನ್ಸಿಲ್ (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ)<br>ಅಭಿವೃದ್ಧಿ ಆಯುಕ್ತರು, ಕರ್ನಾಟಕ<br>ನಿರ್ದೇಶಕರು, ಕೇಂದ್ರ ತನಿಖಾ ದಳ<br>ಮಹಾ ನಿರ್ದೇಶಕರು, ಗಡಿ ಭದ್ರತಾ ಪಡೆ<br>ಮಹಾ ನಿರ್ದೇಶಕರು, ಕೇಂದ್ರ ಮೀಸಲು ಪೊಲೀಸ್<br>ನಿರ್ದೇಶಕರು, ಗುಪ್ತವಾರ್ತಾ ಸಂಸ್ಥೆ<br>ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗೌವರ್ನರ್‌ಗಳು (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ) |

| | | |
|---|---|---|
| | | ಸದಸ್ಯರುಗಳು, ಕೇಂದ್ರ ಆಡಳಿತ ನ್ಯಾಯಮಂಡಳಿ/ ಕರ್ನಾಟಕ ಆಡಳಿತ ನ್ಯಾಯಮಂಡಳಿ<br>ಸದಸ್ಯರುಗಳು, ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿಗಳ ಆಯೋಗ<br>ಸದಸ್ಯರುಗಳು, ಕೇಂದ್ರ ಲೋಕಸೇವಾ ಆಯೋಗ<br>ಕೇಂದ್ರಾಡಳಿತ ಪ್ರದೇಶಗಳ ಸಚಿವರುಗಳು ಮತ್ತು ಕಾರ್ಯನಿರ್ವಾಹಕ ಕೌನ್ಸಿಲರ್, ದೆಹಲಿ (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ)<br>ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು<br>ರಾಜ್ಯ ಮಾಹಿತಿ ಆಯುಕ್ತರು<br>ಮೇಜರ್ ಜನರಲ್ ದರ್ಜೆಯ ಅಥವಾ ತತ್ಸಮಾನ ದರ್ಜೆಯ ಸಶಸ್ತ್ರ ದಳಗಳ ಪ್ರಧಾನ ಸಿಬ್ಬಂದಿ ಅಧಿಕಾರಿಗಳು<br>ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನಸಭೆಗಳ ಸಭಾಧ್ಯಕ್ಷರುಗಳು ಮತ್ತು ದೆಹಲಿ ಮೆಟ್ರೋಪಾಲಿಟನ್ ಕೌನ್ಸಿಲ್‌ನ ಅಧ್ಯಕ್ಷರು (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ) |
| 26. | | ಪೊಲೀಸ್ ಕಮಿಷನರ್, ಬೆಂಗಳೂರು ಸೇರಿದಂತೆ ಹೆಚ್ಚುವರಿ ಡಿ.ಜಿ.ಪಿ.ಗಳು ಮತ್ತು ಪೊಲೀಸ್ ಮಹಾನಿರೀಕ್ಷಕರು<br>ಅರಣ್ಯ ಇಲಾಖೆಯ ಹೆಚ್ಚುವರಿ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯಗಳ ಮುಖ್ಯ ಸಂರಕ್ಷಣಾಧಿಕಾರಿ<br>ಕರ್ನಾಟಕದಲ್ಲಿನ ವಿಭಾಗಗಳ ಪ್ರಾದೇಶಿಕ ಆಯುಕ್ತರುಗಳು<br>ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳು ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು<br>ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯರುಗಳು<br>ಮೇಜರ್-ಜನರಲ್ ದರ್ಜೆಯ ಅಥವಾ ತತ್ಸಮಾನ ದರ್ಜೆಯ ಅಧಿಕಾರಿಗಳು<br>ಕರ್ನಾಟಕ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಗಳು<br>ಕರ್ನಾಟಕ ಸರ್ಕಾರದ ಕಾರ್ಯದರ್ಶಿಗಳು ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು |
| 27. | | ಮಹಾಲೇಖಾಪಾಲರು, ಕರ್ನಾಟಕ<br>ಹೆಚ್ಚುವರಿ ಪೊಲೀಸ್ ಕಮಿಷನರ್‌ಗಳು<br>ಪೊಲೀಸ್ ಉಪ ಮಹಾನಿರೀಕ್ಷಕರು<br>ಅರಣ್ಯ ಸಂರಕ್ಷಣಾಧಿಕಾರಿ<br>ಕರ್ನಾಟಕ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು<br>ಬ್ರಿಗೇಡಿಯರ್, ಕೇಂದ್ರ ಕಾರ್ಯಸ್ಥಾನ, ಕರ್ನಾಟಕ ಮತ್ತು ಗೋವಾ ಉಪ-ಪ್ರದೇಶ<br>ಕೇಂದ್ರ ಅಬಕಾರಿ ಕಲೆಕ್ಟರ್, ಕರ್ನಾಟಕ<br>ಪೋಸ್ಟ್ ಮಾಸ್ಟರ್ ಜನರಲ್, ಕರ್ನಾಟಕ<br>ಆದಾಯ ತೆರಿಗೆ ಆಯುಕ್ತರು, ಕರ್ನಾಟಕ<br>ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು<br>ಪ್ರಧಾನ ವ್ಯವಸ್ಥಾಪಕರು, ದೂರ ಸಂಪರ್ಕ<br>ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು.<br>ಕರ್ನಾಟಕದಲ್ಲಿನ ವಿಶ್ವವಿದ್ಯಾನಿಲಯಗಳ ಕುಲಪತಿಗಳು |

....11

| | | |
|---|---|---|
| 28. | | ಐಎಎಫ್‌ನಲ್ಲಿ ಹಾಗೂ ಭಾರತೀಯ ನೌಕಾಪಡೆಯಲ್ಲಿ ಬ್ರಿಗೇಡಿಯರ್ ಮತ್ತು ತತ್ಸಮಾನ ದರ್ಜೆ ಹೊಂದಿರುವ ಅಧಿಕಾರಿಗಳು.<br>ಜಿಲ್ಲೆಯ ಜಿಲ್ಲಾಧಿಕಾರಿಗಳು (ಅವರಿಗೆ ಸಂಬಂಧಪಟ್ಟ ಜಿಲ್ಲೆಗಳಲ್ಲಿ)<br>ಕರ್ನಾಟಕ ಸರ್ಕಾರದ ಜಂಟಿ ಕಾರ್ಯದರ್ಶಿಗಳು ಮತ್ತು ತತ್ಸಮಾನ ವೃಂದ<br>ಸದಸ್ಯರುಗಳು, ರಾಜ್ಯ ಯೋಜನಾ ಮಂಡಳಿ<br>ಇತರ ಪ್ರಮುಖ ಇಲಾಖಾ ಮುಖ್ಯಸ್ಥರುಗಳು |
| 29. | | ರಕ್ಷಣಾಪಡೆಗಳಲ್ಲಿನ ಕರ್ನಲ್ ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು<br>ಕರ್ನಾಟಕ ಸರ್ಕಾರದ ಉಪಕಾರ್ಯದರ್ಶಿಗಳು ಮತ್ತು ತತ್ಸಮಾನ ವೃಂದಗಳು.<br>ರಕ್ಷಣಾ ಪಡೆಗಳಲ್ಲಿನ ಲೆಫ್ಟಿನೆಂಟ್ ಕರ್ನಲ್ ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು<br>ಇಲಾಖೆಗಳ ಇತರ ಉಪ, ಜಂಟಿ ಮತ್ತು ಹೆಚ್ಚುವರಿ ಮುಖ್ಯಸ್ಥರುಗಳು<br>ವಿಶೇಷ ಡೆಪ್ಯುಟಿ ಕಮೀಷನರುಗಳು ಮತ್ತು ಇತರ ತತ್ಸಮಾನ ವೃಂದಗಳು<br>ಜಿಲ್ಲೆಗಳ ಪೋಲೀಸ್ ಅಧೀಕ್ಷಕರುಗಳು<br>ಅರಣ್ಯ ಉಪ ಸಂರಕ್ಷಣಾಧಿಕಾರಿ (ಐಎಫ್‌ಎಸ್ ಮಾತ್ರ) |
| 30. | | ಕಿರಿಯ ಶ್ರೇಣಿಯ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು;<br>ಐಎಫ್‌ಎಸ್ ಕಿರಿಯ ಶ್ರೇಣಿಯ ಅಧಿಕಾರಿಗಳು;<br>ಉಪ ನಿರ್ದೇಶಕರುಗಳು (ಹಿರಿಯ ಶ್ರೇಣಿ) ಮತ್ತು ತತ್ಸಮಾನ ವೃಂದಗಳು;<br>ಉಪ-ವಿಭಾಗಗಳ ಉಪ ವಿಭಾಗಾಧಿಕಾರಿಗಳು ಮತ್ತು ತತ್ಸಮಾನ ವೃಂದಗಳು. |
| **ಟಿಪ್ಪಣಿ:** 1 | | ಈ ಆದ್ಯತಾಸೂಚಿಪಟ್ಟಿಯಲ್ಲಿನ ಕ್ರಮವನ್ನು ರಾಜ್ಯ ಮತ್ತು ಸಮಾರಂಭದ ಸಂದರ್ಭಗಳಗಾಗಿ ಯೋಜಿಸಲಾಗಿದೆ, ಆದರೆ ಅದು ಸರ್ಕಾರದ ದೈನಂದಿನ ವ್ಯವಹಾರಕ್ಕೆ ಅನ್ವಯವಾಗುವುದಿಲ್ಲ. |
| **ಟಿಪ್ಪಣಿ: 2** | | ಆದ್ಯತಾ ಸೂಚಿಪಟ್ಟಿಯಲ್ಲಿನ ವ್ಯಕ್ತಿಗಳು, ಅನುಚ್ಛೇದಗಳ ಸಂಖ್ಯೆಯ ಕ್ರಮದಲ್ಲಿ ಸ್ಥಾನವನ್ನು ಪಡೆಯುತ್ತಾರೆ. ಈ ಅನುಚ್ಛೇದಗಳಲ್ಲಿನ ನಮೂದುಗಳನ್ನು ಅಕಾರಾದಿಯಾಗಿ ಅಳವಡಿಸಲಾಗಿದೆ. ಒಂದೇ ಅನುಚ್ಛೇದದಲ್ಲಿ ಸೇರ್ಪಡೆಗೊಂಡಿರುವಂಥವರು ಆ ಅನುಚ್ಛೇದಗಳಲ್ಲಿ ಸೇರ್ಪಡೆಗೊಂಡ ದಿನಾಂಕದ ಅನುಸಾರ ಪರಸ್ಪರ ಆದ್ಯತೆಯನ್ನು ಪಡೆಯುತ್ತಾರೆ. ಆದರೂ, ಒಂದೇ ಅನುಚ್ಛೇದದಲ್ಲಿ ಒಳಗೊಂಡಿರುವಂಥ ವಿವಿಧ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಗಣ್ಯವ್ಯಕ್ತಿಗಳು, ಅವರ ರಾಜ್ಯಗಳ ಅಥವಾ ಕೇಂದ್ರಾಡಳಿತ ಪ್ರದೇಶಗಳ ಹೊರಗೆ ಸಮಾರಂಭಕ್ಕೆ ಹಾಜರಾಗಿರುವಲ್ಲಿ ಮತ್ತು ಅವರ ನಮೂದಿನ ದಿನಾಂಕಗಳನ್ನು ಖಚಿತಪಡಿಸುವುದು ಕಷ್ಟವಾದರೆ, ಅವರು ಆ ಅನುಚ್ಛೇದದಲ್ಲಿ ಪ್ರವೇಶ ಪಡೆದ ದಿನಾಂಕದ ಅನುಸಾರವಾಗಿ ಯಾರ ಆದ್ಯತೆಯನ್ನು ನಿರ್ಧರಿಸಲಾಗಿದೆಯೋ ಅಂಥವರ ನಂತರ ಸಂಬಂಧಪಟ್ಟ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಹೆಸರುಗಳ ಅಕಾರಾದಿ ಕ್ರಮದಲ್ಲಿ ಅವರ ನಡುವೆ ಪರಸ್ಪರ ಆದ್ಯತೆಯನ್ನು ಗೊತ್ತುಪಡಿಸಬಹುದು. |
| **ಟಿಪ್ಪಣಿ: 3** | | ಅನುಚ್ಛೇದ 7ರಲ್ಲಿ, ಮಾಜಿ ಪ್ರಧಾನಮಂತ್ರಿಗಳು ಕೇಂದ್ರದ ಕ್ಯಾಬಿನೆಟ್ ದರ್ಜೆ ಸಚಿವರ ಮತ್ತು ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿನ ವಿರೋಧಪಕ್ಷದ ನಾಯಕರಿಗಿಂತ ಮೇಲೆ ಆದ್ಯತೆಯನ್ನು ಪಡೆಯುತ್ತಾರೆ. ರಾಜ್ಯಗಳ ಮುಖ್ಯಮಂತ್ರಿಗಳು, ಅವರವರ ರಾಜ್ಯಗಳೊಳಗೆ, ಅವರವರ ರಾಜ್ಯಗಳಲ್ಲಿ ನಡೆಯುವ ಸರ್ಕಾರಿ ಸಮಾರಂಭಗಳಲ್ಲಿ ಕೇಂದ್ರದ ಕ್ಯಾಬಿನೆಟ್ ದರ್ಜೆ ಸಚಿವರಿಗಿಂತ ಮೇಲೆ ಆದ್ಯತೆಯನ್ನು ಪಡೆಯುತ್ತಾರೆ. |

| | | |
|---|---|---|
| **ಟಿಪ್ಪಣಿ: 4** | | ಅನುಚ್ಛೇದ 8ರಲ್ಲಿ – |
| | ಎ. | ಭಾರತಕ್ಕೆ ಕಳುಹಿಸಲ್ಪಟ್ಟಿರುವ ಕಾಮನ್‌ವೆಲ್ತ್ ದೇಶಗಳ ವಿಶೇಷ ರಾಯಭಾರಿಗಳು ಮತ್ತು ಪೂರ್ಣಾಧಿಕಾರವುಳ್ಳ ರಾಯಭಾರಿ ಹಾಗೂ ಹೈ ಕಮಿಷನರುಗಳು, ಸಂಬಂಧಪಟ್ಟ ರಾಜ್ಯಗಳ ಹೊರಗಿನ ರಾಜ್ಯದ ರಾಜ್ಯಪಾಲರುಗಳ ಮೇಲೆ ಒಟ್ಟಾಗಿ ಸ್ಥಾನವನ್ನು ಪಡೆಯುತ್ತಾರೆ. |
| | ಬಿ. | ರಾಜ್ಯಗಳ ರಾಜ್ಯಪಾಲರುಗಳು ತಮ್ಮ ತಮ್ಮ ರಾಜ್ಯಗಳ ಹೊರಗೆ, ತಮ್ಮ ರಾಜ್ಯಗಳ ಹೊರಗಿನ ರಾಜ್ಯಗಳ ಮುಖ್ಯಮಂತ್ರಿಗಳಗಿಂತ ಮೇಲೆ ಒಟ್ಟಾಗಿ ಸ್ಥಾನವನ್ನು ಪಡೆಯುತ್ತಾರೆ. |
| **ಟಿಪ್ಪಣಿ: 5** | | ವಿದೇಶಾಂಗ ವ್ಯವಹಾರಗಳ ಮಂತ್ರಾಲಯವು, ವಿದೇಶಿ ಗಣ್ಯರಿಗೆ ಮತ್ತು ಭಾರತೀಯ ರಾಯಭಾರಿಗಳಿಗೆ, ಹೈ ಕಮಿಷನರುಗಳಿಗೆ ಹಾಗೂ ಸಚಿವರ ಪೂರ್ಣಾಧಿಕಾರವುಳ್ಳ ರಾಯಭಾರಿಗಳಿಗೆ, ಅವರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸೂಕ್ತ ಸ್ಥಾನಗಳನ್ನು ನೀಡಬಹುದು. |
| **ಟಿಪ್ಪಣಿ: 6** | | ಟಿಪ್ಪಣಿ 2ರಲ್ಲಿ ವಿಧಿಸಲಾದ ಕಾರ್ಯವಿಧಾನದಲ್ಲಿ ಏನೇ ಇದ್ದರೂ, ಅನುಚ್ಛೇದ 10ರಲ್ಲಿ ವ್ಯಕ್ತಿಗಳಲ್ಲಿ ಪರಸ್ಪರ ಸ್ಥಾನ ಮತ್ತು ಆದ್ಯತೆಯನ್ನು ಈ ಮುಂದಿನ ಕ್ರಮದಲ್ಲಿ ನೀಡತಕ್ಕದ್ದು: |
| | i. | ಉಪ ಸಭಾಪತಿ, ರಾಜ್ಯಸಭೆ |
| | ii. | ಉಪ ಸಭಾಧ್ಯಕ್ಷರು, ಲೋಕಸಭೆ |
| | iii. | ಕೇಂದ್ರದ ರಾಜ್ಯ ಸಚಿವರುಗಳು ಮತ್ತು ರಕ್ಷಣಾ ವಿಷಯಗಳಿಗೆ ಸಂಬಂಧಿಸಿದ ರಕ್ಷಣಾ ಮಂತ್ರಾಲಯದಲ್ಲಿನ ಯಾರೇ ಇತರ ಸಚಿವರು |
| | iv. | ರಾಜ್ಯಗಳ ಉಪ ಮುಖ್ಯಮಂತ್ರಿಗಳು |
| | v. | ಯೋಜನಾ ಆಯೋಗದ ಸದಸ್ಯರುಗಳು |
| | | ಆದರೂ, ರಾಜ್ಯಗಳ ಉಪಮುಖ್ಯಮಂತ್ರಿಗಳು, ತಮ್ಮ ತಮ್ಮ ರಾಜ್ಯಗಳ ಹೊರಗೆ, ಈ ಅನುಚ್ಛೇದದಲ್ಲಿ ಉಲ್ಲೇಖಿಸಿರುವ ಎಲ್ಲಾ ಇತರ ಗಣ್ಯರಿಗಿಂತ ಯಾವಾಗಲೂ ಕೆಳಗಿನ ಸ್ಥಾನದಲ್ಲಿರುತ್ತಾರೆ. |
| **ಟಿಪ್ಪಣಿ: 6** | **(ಅ):** | **ಆದ್ಯತಾ ಸೂಚಿಯ ಟಿಪ್ಪಣಿ–2ರಲ್ಲಿ ವಿಧಿಸಲಾದ ಕಾರ್ಯವಿಧಾನವೇನೇ ಇದ್ದರೂ ಸಹ ವಿಧಾನಸಭೆಯನ್ನು ಪ್ರತಿನಿಧಿಸುವ ಸ್ಥಳೀಯ ವಿಧಾನಸಭೆ ಶಾಸಕರ ಅಧ್ಯಕ್ಷತೆಯಲ್ಲಿಯೇ ಸರ್ಕಾರದ ಕಾರ್ಯಕ್ರಮಗಳು ನಡೆಸತಕ್ಕದ್ದು.** |
| **ಟಿಪ್ಪಣಿ: 7** | | ರಾಜ್ಯ ವಿಧಾನಪರಿಷತ್ತಿನ ಸಭಾಪತಿಯವರು, ವಿಧಾನ ಸಭಾಧ್ಯಕ್ಷರು ಒಂದೇ ದಿನ ಚುನಾಯಿತರಾಗಿದ್ದ ಸಂದರ್ಭದಲ್ಲಿ, ವಿಧಾನಪರಿಷತ್ತಿನ ಸಭಾಪತಿಯವರು ವಿಧಾನಸಭಾಧ್ಯಕ್ಷರಿಗಿಂತ ಮೇಲಿನ ಸ್ಥಾನವನ್ನು ಪಡೆಯುತ್ತಾರೆ. |
| **ಟಿಪ್ಪಣಿ 8:** | | ರಾಜ್ಯದ ಪ್ರಮುಖ ಸಮಾರಂಭಗಳಿಗೆ ಸಂಸತ್ ಸದಸ್ಯರನ್ನು ಒಟ್ಟಿಗೆ ಆಹ್ವಾನಿಸಿದಾಗ, ಅವರಿಗೆ ಮೀಸಲಾದ ಸ್ಥಾನಗಳು ಮುಖ್ಯ ನ್ಯಾಯಮೂರ್ತಿ, ಲೋಕಸಭಾ ಸ್ಪೀಕರ್, ರಾಯಭಾರಿಗಳು ಮುಂತಾದವರ ನಂತರ ಇರತಕ್ಕದ್ದು. |
| **ಟಿಪ್ಪಣಿ: 9** | | ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನಸಭೆಗಳ ಸಭಾಧ್ಯಕ್ಷರು ಮತ್ತು ದೆಹಲಿಯ ಮೆಟ್ರೋಪಾಲಿಟನ್ ಕೌನ್ಸಿಲ್‌ನ ಅಧ್ಯಕ್ಷರು, ಒಂದೇ ಅನುಚ್ಛೇದದಲ್ಲಿ ಸೇರ್ಪಡೆ ಮಾಡಲಾದ ಮಂತ್ರಿಗಳಿಗಿಂತ ಹಾಗೂ ಕಾರ್ಯನಿರ್ವಾಹಕ ಕೌನ್ಸಿಲರುಗಳಿಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ. |

…..13

| | | |
|---|---|---|
| **ಟಿಪ್ಪಣಿ:10** | | ಅನುಚ್ಛೇದ 23ರಲ್ಲಿ – |
| | ಎ. | ವಿದೇಶಾಂಗ ಕಾರ್ಯದರ್ಶಿಯನ್ನು ಹೊರತುಪಡಿಸಿ ವಿದೇಶಾಂಗ ವ್ಯವಹಾರಗಳ ಮಂತ್ರಾಲಯದಲ್ಲಿನ ಕಾರ್ಯದರ್ಶಿಗಳು, ತಮ್ಮ ತಮ್ಮ ನಡುವೆ ಭಾರತೀಯ ವಿದೇಶಾಂಗ ಸೇವೆಗಳ ಗ್ರೇಡ್ 1ರಲ್ಲಿ ತಮ್ಮ ಜ್ಯೇಷ್ಠತೆಯ ಕ್ರಮದಲ್ಲಿ ಆದ್ಯತೆ ಪಡೆಯುತ್ತಾರೆ ಮತ್ತು ಅವರಿಬ್ಬರೂ ವಿದೇಶಾಂಗ ಕಾರ್ಯದರ್ಶಿಯ ನಂತರ ಆದ್ಯತೆ ಪಡೆಯುತ್ತಾರೆ. |
| | ಬಿ. | ಅಲ್ಪಸಂಖ್ಯಾತರ ಆಯೋಗದ ಸದಸ್ಯರುಗಳು ಮತ್ತು ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಆಯೋಗದ ಸದಸ್ಯರುಗಳು, ಯಾವಾಗಲೂ ಈ ಆಯೋಗಗಳ ಕಾರ್ಯದರ್ಶಿಗಳಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ; |
| | ಸಿ. | ದೆಹಲಿ/ ನವದೆಹಲಿಯಲ್ಲಿ ನಡೆಸಲಾಗುವ ಸರ್ಕಾರಿ ಸಮಾರಂಭಗಳಲ್ಲಿ, ಸೇನಾ ಕಮ್ಯಾಂಡರ್‌ಗಳು/ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರು ಅಥವಾ ಇತರ ಸೇವೆಗಳಲ್ಲಿನ ತತ್ಸಮಾನರಾದವರು ಭಾರತ ಸರ್ಕಾರದ ಕಾರ್ಯದರ್ಶಿಗಳ ನಂತರ ಸ್ಥಾನ ಪಡೆಯುತ್ತಾರೆ. |
| **ಟಿಪ್ಪಣಿ: 11** | | ಅನುಚ್ಛೇದ 25ರಲ್ಲಿ – |
| | ಎ. | ವಿದೇಶಾಂಗ ವ್ಯವಹಾರಗಳ ಮಂತ್ರಾಲಯದಲ್ಲಿನ ಹೆಚ್ಚುವರಿ ಕಾರ್ಯದರ್ಶಿಗಳು ತಮ್ಮ ತಮ್ಮ ನಡುವೆ ಭಾರತೀಯ ವಿದೇಶಾಂಗ ಸೇವೆಗಳ ಗ್ರೇಡ್ ಖಖರಲ್ಲಿ ಅವರ ಜ್ಯೇಷ್ಠತೆಯ ಕ್ರಮದಲ್ಲಿ ಆದ್ಯತೆ ಪಡೆಯುತ್ತಾರೆ: |
| | ಬಿ. | ಹೆಚ್ಚುವರಿ ಸಾಲಿಸಿಟರ್ ಜನರಲ್‌ರವರು ರಾಜ್ಯಗಳ ಅಡ್ವೊಕೇಟ್ ಜನರಲ್‌ರಿಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ: |
| | ಸಿ. | ಲೆಫ್ಟಿನೆಂಟ್ ಗವರ್ನರ್‌ಗಳು ಮುಖ್ಯಮಂತ್ರಿಗಳಗಿಂತ ಮತ್ತು ದೆಹಲಿಯ ಮುಖ್ಯ ಕಾರ್ಯನಿರ್ವಾಹಕ ಕೌನ್ಸಿಲರ್‌ಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ, ಹಾಗೂ ಮೇಲೆ ತಿಳಿಸಿರುವವರಲ್ಲಿ ಎರಡನೆಯವರು ವಿಧಾನ ಸಭಾಧ್ಯಕ್ಷರು ಮತ್ತು ಅಧ್ಯಕ್ಷರು, ಮೆಟ್ರೋಪಾಲಿಟನ್ ಕೌನ್ಸಿಲ್, ದೆಹಲಿ – ಇವರಿಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ: |
| | ಡಿ. | ಕೇಂದ್ರಾಡಳಿತ ಪ್ರದೇಶಗಳ ವಿಧಾನ ಸಭೆಗಳ ಉಪಸಭಾಧ್ಯಕ್ಷರು ಮತ್ತು ದೆಹಲಿಯ ಮೆಟ್ರೋ ಪಾಲಿಟನ್ ಕೌನ್ಸಿಲ್‌ನ ಉಪ ಸಭಾಪತಿಯವರು ಕೇಂದ್ರಾಡಳಿತ ಪ್ರದೇಶಗಳ ಮಂತ್ರಿಗಳು ಹಾಗೂ ದೆಹಲಿಯ ಕಾರ್ಯನಿರ್ವಾಹಕ ಕೌನ್ಸಿಲರುಗಳ ನಂತರ ಆದ್ಯತೆ ಪಡೆಯುತ್ತಾರೆ. |
| **ಟಿಪ್ಪಣಿ:12** | | 26ನೇ ಅನುಚ್ಛೇದದ ಉದ್ದೇಶಕ್ಕಾಗಿ, ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳ ಹುದ್ದೆಗಳಿಗೆ ಸಮಾನವಾದ ಹುದ್ದೆಗಳನ್ನು ಗೃಹ ವ್ಯವಹಾರಗಳ ಮಂತ್ರಾಲಯವು ನಿರ್ಧರಿಸುತ್ತದೆ. |
| **ಟಿಪ್ಪಣಿ:13** | | 23ರಿಂದ 28ರವರೆಗಿನ ಅನುಚ್ಛೇದಗಳಲ್ಲಿ –<br>ರಕ್ಷಣಾ ಸೇವೆಯ ಅತ್ಯಂತ ಹಿರಿಯ ಪ್ರತಿನಿಧಿಗಳನ್ನು ಮತ್ತು ಪೋಲೀಸ್ ಮಹಾ ನಿರ್ದೇಶಕರನ್ನು ಸೇವಾ ಜ್ಯೇಷ್ಠತೆಯ ಕ್ರಮದಲ್ಲಿ ಮತ್ತು ಅವರು ಪ್ರತಿನಿಧಿಸುವ ಸೇನಾಪಡೆಯನ್ನು ಅಂದರೆ, ಭೂ ಸೇನೆ, ನೌಕಾಪಡೆ, ವಾಯುಪಡೆ ಮತ್ತು ಪೋಲೀಸ್ ಪಡೆಯ ಕ್ರಮದಲ್ಲಿ ಪರಿಚಯಿಸುವ ಆದರೆ, ಆದ್ಯತಾಸೂಚಿ ಪಟ್ಟಿಯಲ್ಲಿ ಆಯಾ ಅಧಿಕಾರಿಗಳ ಹುದ್ದೆಯ ಕ್ರಮವನ್ನು ಅನುಸರಿಸದೆ ಪರಿಚಯಿಸುವ ಈಗಿನ ಪದ್ಧತಿಯು ಗಣರಾಜ್ಯೋತ್ಸವ ದಿನಾಚರಣೆ ಮತ್ತು ಸ್ವಾತಂತ್ರ್ಯ ದಿನಾಚರಣೆಗಳಂದು ಆಂತರಿಕ ಸೇವೆಗಳ ಪೆರೇಡುಗಳ ಸಂದರ್ಭದಲ್ಲಿ ಮುಂದುವರೆಯತಕ್ಕದ್ದು. |
| | | ಇತರ ಎಲ್ಲಾ ಸಂದರ್ಭಗಳಲ್ಲಿ, ರಕ್ಷಣಾ ಸೇವೆಗಳ ಪ್ರತಿನಿಧಿಯನ್ನು ಮತ್ತು ಪೋಲೀಸ್ ಮಹಾ ನಿರ್ದೇಶಕರು/ ಮಹಾ ನಿರೀಕ್ಷಕರನ್ನು ಆದ್ಯತಾ ಸೂಚಿಪಟ್ಟಿಯಲ್ಲಿ ಆಯಾ ಅಧಿಕಾರಿಯ ಹುದ್ದೆಯ ಕ್ರಮದಲ್ಲಿ ಪರಿಚಯಿಸಬಹುದೇ ಹೊರತು ಒಂದು ಸಮೂಹವಾಗಿ ಅಲ್ಲ. |

**ಜಯವಿಭವ ಸ್ವಾಮಿ**
**ಸರ್ಕಾರದ ಉಪ ಕಾರ್ಯದರ್ಶಿ,**
**ಸಿ.ಆ.ಸು.ಇ (ರಾಜ್ಯ ಶಿಷ್ಟಾಚಾರ)**